ಡಬ್ಬಿಂಗ್ ಹಕ್ಕುಗಳಿಗಾಗಿ ಬೇಡಿಕೆ ಬಂತು. ಅನಿವಾರ್ಯವಾಗಿ ಕೊಟ್ಟೆದ್ದೂ ಆಯಿತು. ಕನ್ನಡದಲ್ಲಿಯೇ ತಯಾರಾದ ವೆಬ್‌ಸಿರೀಸ್ ಕನ್ನಡಕ್ಕಿಂತ ಮೊದಲು ತೆಲುಗಿನಲ್ಲಿಯೇ ಬಿಡುಗಡೆಯಾಯಿತು.

'ಕನ್ನಡದ್ದೇ ಆದ ಒಂದು ಒಟಿಟಿ ವೇದಿಕೆ ಇದ್ದರೆ ನಮಗೆ ಹೀಗಾಗುತ್ತಿರಲಿಲ್ಲ. ಹಣ ಹಾಕಿದವರಿಗೆ ಅದನ್ನು ಮರಳಿ ಪಡೆಯುವುದೂ ಅನಿವಾರ್ಯಗಿರುತ್ತದೆ. ಹಾಗಾಗಿ ಡಬ್ಬಿಂಗ್ ರೈಟ್ಸ್ ಅನ್ನು ತೆಲುಗಿಗೆ ಕೊಟ್ಟೆವು. ಕನ್ನಡದ ನೇಟಿವಿಟಿಗೆ ತಕ್ಕ ಹಾಗೆ ಬರೆದ, ಚಿತ್ರೀಕರಿಸಿದ ಸಿರೀಸ್ ಇದು. ಅಲ್ಲಿ ಜನ ಏನೆನ್ನುತ್ತಾರೋ ಎಂಬ ಅಂಜಿಕೆ ಇತ್ತು. ಆದರೆ ಅಲ್ಲಿನ ಜನರು ಈ ಸಿರೀಸ್ ಅನ್ನು ಬಹಳ ಮೆಚ್ಚಿಕೊಂಡರು. ಈ ಸಿರೀಸ್ ನೋಡಿಯೇ ಸಂಜನಾ ಆನಂದ್ ಅವರಿಗೆ ಒಂದು ತೆಲುಗು ಸಿನಿಮಾದಲ್ಲಿ ನಟಿಸುವ ಅವಕಾಶವೂ ಸಿಕ್ಕಿದೆ. ಇದೂ ನಮ್ಮ ಯಶಸ್ಸಲ್ಲವೇ?' ಎಂದು ಪ್ರಶ್ನಿಸುತ್ತಾರೆ ನಾಗಭೂಷಣ್.

ಈಗ ಕನ್ನಡದ ಕಂಟೆಂಟ್ ಬಗೆಗೆ ಹಲವು ಒಟಿಟಿಗಳು ಗಮನ ಹರಿಸುತ್ತಿರುವುದು ಅವರಿಗೆ ಖುಷಿ ಕೊಟ್ಟಿದೆ. 'ವೂಟ್‌ನವರು ನಮ್ಮ ವೆಬ್‌ಸಿರೀಸ್ ನೋಡಿ ತುಂಬ ಇಷ್ಟಪಟ್ಟು ಖರೀದಿಸಿದರು. ಇದರಿಂದ ನಮ್ಮ ಹಾಗೆ ಇನ್ನಷ್ಟು ತಂಡಗಳಿಗೆ ಒಳ್ಳೆಯ ಸಿರೀಸ್ ಮಾಡಿದರೆ ಕೊಳ್ಳುವವರಿದ್ದಾರೆ ಎಂಬ ಆತ್ಮವಿಶ್ವಾಸ ಸಿಗುತ್ತದೆ' ಎಂದು ಖುಷಿಯಿಂದಲೇ ಹೇಳಿಕೊಳ್ಳುತ್ತಾರೆ ನಾಗಭೂಷಣ್.

ಇತ್ತೀಚೆಗಷ್ಟೇ ಬಿಡುಗಡೆಯಾಗಿರುವ ಈ ವೆಬ್‌ಸಿರೀಸ್‌ಗೆ ಒಳ್ಳೆಯ ಸ್ಪಂದನ ಸಿಗುತ್ತಿರುವುದೂ ಅವರ ಖುಷಿಯನ್ನು ಇಮ್ಮಡಿಸಿದೆ. ಹಾಗೆಯೇ ಇನ್ನಷ್ಟು ಒಳ್ಳೆಯ ವಸ್ತುಗಳನ್ನು ಇಟ್ಟುಕೊಂಡು ಸಿರೀಸ್ ಬರೆಯುವ ಉಮೇದಿಯನ್ನೂ ಹುಟ್ಟಿಸಿದೆ. ಈ ಉತ್ಸಾಹದ ಭರದಲ್ಲಿಯೂ ಅವರು, 'ನಮಗೆ ಖಂಡಿತ ಇನ್ನಷ್ಟು ಸಿರೀಸ್ ಮಾಡುವ ಉತ್ಸಾಹ ಇದೆ. ಆದರೆ ಅವೆಲ್ಲವೂ 'ಹನಿಮೂನ್'ಗೆ ಸಿಗುವ ಸ್ಪಂದನ, ಅದು ಮಾಡುವ ಬ್ಯುಸಿನೆಸ್ ಮೇಲೆ ಅವಲಂಬಿತವಾಗಿದೆ' ಎಂದು ಹೇಳಿ ನಗುತ್ತಾರೆ ನಾಗಭೂಷಣ್.



# ನಿರ್ದೇಶಕನ ಪಾತ್ರದಲ್ಲಿ ಸುಚೇಂದ್ರ ಪ್ರಸಾದ್

ರಂಗಭೂಮಿ, ಸಿನಿಮಾ ನಟನೆಯ ಮೂಲಕ, ಅದಕ್ಕಿಂತಲೂ ಶುದ್ಧ ಕನ್ನಡದ ಮಾತುಗಳ ಮೂಲಕವೇ ಗುರ್ತಿಸಿಕೊಂಡಿರುವ ನಟ ಸುಚೇಂದ್ರ ಪ್ರಸಾದ್ ಈಗ ನಿರ್ದೇಶನಕ್ಕಿಳಿದಿದ್ದಾರೆ. ಕನ್ನಡವನ್ನು ಕಲ್ಲಿನಲ್ಲಿ ಕಟೆದ ಹಾಗೆ ಮಾತಾಡುವ ಅವರು ನಿರ್ದೇಶಿಸುವ ಸಿನಿಮಾ ಕೂಡ ಕನ್ನಡತನವನ್ನೇ ಉಸಿರಾಡುತ್ತವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ?

ಸುಚೇಂದ್ರ ಪ್ರಸಾದ್ ನಿರ್ದೇಶಿಸುತ್ತಿರುವ ಸಿನಿಮಾದಲ್ಲೊಂದು ವಿಶೇಷವಿದೆ. ಸಿನಿಮಾ ಕಥೆಗೆ ಪೂರಕವಾಗಿ ಹಾಡುಗಳನ್ನು ಬರೆದು, ಸಂಗೀತ ಸಂಯೋಜಿಸಿ ಅಳವಡಿಸುವುದು ವಾಡಿಕೆ. ಆದರೆ ಇಲ್ಲಿ ಅದು ತಿರುಗಾಮುರುಗಾಗಿದೆ. ದೊಡ್ಡರಂಗೇಗೌಡರ 'ಮಾವು–ಬೇವು' ಎಂಬ ಗೀತಗುಚ್ಛವನ್ನು ಆಧರಿಸಿ ಕಥೆಯನ್ನು ರಚಿಸಲಾಗಿದೆ. 75ನೇ ಇಸ್ವಿಯಲ್ಲಿ ಬಿಡುಗಡೆಯಾದ ಈ ಗೀತಗುಚ್ಛಕ್ಕೆ ಸಿ. ಅಶ್ವತ್ ಸಂಗೀತ ಸಂಯೋಜನೆ, ಎಸ್.ಪಿ. ಬಾಲಸುಬ್ರಹ್ಮಣ್ಯ ಗಾಯನ ಮತ್ತು ಎಲ್. ವೈದ್ಯನಾಥ ಅವರ ವಾದ್ಯಸಹಕಾರವಿದೆ. ಆ ಗೀತಗುಚ್ಛದಲ್ಲಿನ ಎಲ್ಲ ಹಾಡುಗಳನ್ನೂ ಹಾಗೆಯೇ ಬಳಸಿಕೊಂಡು ಅದು ಧ್ವನಿಸುವ ಅರ್ಥಸಾಧ್ಯತೆಗಳನ್ನೇ ಇಟ್ಟುಕೊಂಡು ಕಥೆ ಹೆಣೆದು ತೆರೆಯ ಮೇಲೆ ತರಲು ಹೊರಟಿದ್ದಾರೆ ಸುಚೇಂದ್ರ ಪ್ರಸಾದ್. ಈ ಸಿನಿಮಾಗೂ 'ಮಾವು–ಬೇವು' ಎಂದೇ ಹೆಸರಿಡಲಾಗಿದೆ.

'ಈ ಹಾಡುಗಳು ಹಳೆಯವಾದರೂ ಈಗಲೂ ಅಷ್ಟೇ ಪ್ರಸ್ತುತವಾಗಿವೆ. ಇದರಲ್ಲಿನ ಸಾಹಿತ್ಯಾತ್ಮಕ ಪ್ರತಿಮೆಗಳು ಈ ಕಾಲಕ್ಕೇ ಹೆಚ್ಚು ಹೊಂದುತ್ತವೆ. ಅದನ್ನು ಆಧರಿಸಿಯೇ ಕಥೆ ರೂಪಿಸಿಕೊಂಡಿದ್ದೇವೆ. ಇಂಥ ಪ್ರಯತ್ನ ಕನ್ನಡದಲ್ಲಿ ಮೊದಲನೇ ಸಲ ಆಗುತ್ತಿರುವುದು' ಎನ್ನುವ ಅವರು, 'ಹಿಂದೆ ಮೈಸೂರು ಅನಂತಸ್ವಾಮಿ ಅವರ ಗೀತೆಗಳನ್ನು ಇಟ್ಟುಕೊಂಡು ಮೈಸೂರು ಮಲ್ಲಿಗೆ ಹೆಸರಿನ ಸಿನಿಮಾ ಬಂದಿತ್ತು. ಆದರೆ ಅಲ್ಲಿ ಕಥೆಯನ್ನು ರಚಿಸಿಕೊಂಡು, ಅದಕ್ಕೆ ಪೂರಕವಾಗಿ ಅವರ ಹಾಡುಗಳನ್ನು ಬಳಸಿಕೊಳ್ಳಲಾಗಿತ್ತು' ಎಂದೂ ನೆನಪಿಸಿಕೊಳ್ಳುತ್ತಾರೆ.

ಸಾಯಿ ಗಗನ ಪ್ರೊಡಕ್ಷನ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾಕ್ಕೆ ರಾಜಶೇಖರ ಎನ್ನುವವರು ಹಣ ಹೂಡುತ್ತಿದ್ದಾರೆ.

'ನಟರ ಆಯ್ಕೆ ಇನ್ನೂ ನಡೆಯುತ್ತಿದೆ. ಈ ಸಿನಿಮಾಕ್ಕೆ ಕಲಾವಿದರನ್ನು ಬಳಸಿಕೊಳ್ಳುವುದಿಲ್ಲ. ಬದಲಿಗೆ ಸಹಜವಾಗಿ ವರ್ತಿಸುವಂಥವರನ್ನು ಇಟ್ಟುಕೊಂಡು ಸಿನಿಮಾ ಮಾಡುತ್ತೇವೆ. ಪಾತ್ರವರ್ಗದ ಆಯ್ಕೆ ನಡೆದ ನಂತರ ಚಿತ್ರೀಕರಣ ಶುರು ಮಾಡಲಿದ್ದೇವೆ' ಸುಚೇಂದ್ರ ಪ್ರಸಾದ್ ಮಾಹಿತಿ ನೀಡುತ್ತಾರೆ.

ಸ್ವತಃ ದೊಡ್ಡರಂಗೇಗೌಡರೇ ಕಥೆಯನ್ನು ಕೇಳಿ ಮೆಚ್ಚಿಕೊಂಡಿರುವುದು ತಂಡವ ವಿಶ್ವಾಸವನ್ನು ಹೆಚ್ಚಿಸಿದೆ.

